ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/ಶೈವಿ/06/ಪದವಿ ಶುಲ್ಕ/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಶೇಷಾದ್ರಿ ರಸ್ತೆ, ಬೆಂಗಳೂರು-560001,
ದಿನಾಂಕ : 09.09.2022.

**ಸುತ್ತೋಲೆ**

ವಿಷಯ : ಕಾಲೇಜಿನ ಸಾಂಸ್ಥಿಕ ಯೋಜನಾ ಸಮಿತಿಯನ್ನು ರಚಿಸಿ ಕ್ರಿಯಾಯೋಜನೆಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ: ಇಡಿ 33 ಹೆಚ್‌ಪಿಇ 2022, ದಿನಾಂಕ:14.08.2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದಲ್ಲಿ 2022-23ನೇ ಸಾಲಿನಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಂಗ್ರಹಿಸಲಾಗುವ ಸರ್ಕಾರಿ ಶುಲ್ಕಗಳು ಸೇರಿದಂತೆ ಎಲ್ಲಾ ಶುಲ್ಕಗಳನ್ನು ಕೋಷ್ಟಕ -1ರಲ್ಲಿನ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯ (Institutional Development Plan - IDP) ಸಮಿತಿಯನ್ನು ರಚಿಸಿ ಹಾಗೂ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಆಯುಕ್ತಾಲಯಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಈ ಸಂಬಂಧ, ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ IDP ಸಮಿತಿಯನ್ನು ರಚಿಸಿ, ಕಾಲೇಜಿನಲ್ಲಿ ಸಂಗ್ರಹಿಸಲಾಗುವ ಶುಲ್ಕಗಳನ್ನು ಸರ್ಕಾರಿ ಆದೇಶದಲ್ಲಿ ತಿಳಿಸಿರುವಂತೆ ಆದ್ಯತೆಯ ಮೇರೆಗೆ ಈ ಕೆಳಕಂಡ ಮೂಲಭೂತ ಸೌಕರ್ಯಗಳಿಗೆ/ ನಿರ್ವಹಣೆ ಮುಂತಾದವುಗಳಿಗೆ ಬಳಸಿಕೊಳ್ಳೊಲು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು.

- ಕಟ್ಟಡ ನಿರ್ವಹಣೆ /ದುರಸ್ಥಿ, ಶೌಚಾಲಯ ನಿರ್ವಹಣೆ, ಕಿಟಕಿ, ಬಾಗಿಲು ಮತ್ತು ವಿದ್ಯುತ್ ದುರಸ್ಥಿ, ಕಾಲೇಜು ಕಟ್ಟಡಗಳ ಸುಣ್ಣ ಬಣ್ಣ
- ಕುಡಿಯುವ ನೀರಿನ ಸೌಲಭ್ಯ
- ಪೀಠೋಪಕರಣಗಳ ಖರೀದಿ/ ದುರಸ್ಥಿ, ಪ್ರಯೋಗಾಲಯಗಳ ಉಪಕರಣಗಳ ಖರೀದಿ, ಇಂಟರ್‌ನೆಟ್ ಸೌಲಭ್ಯ
- ಗ್ರಂಥಾಲಯ ಪುಸ್ತಕ, ಪೀಠೋಪಕರಣ ಖರೀದಿ/ ದುರಸ್ಥಿ
- ಕ್ರೀಡಾ ಉಪಕರಣಗಳು
- ಕಾಲೇಜಿನ ಅವಶ್ಯಕತೆಗೆ ತಕ್ಕಂತೆ ಇತರೆ ವೆಚ್ಚಗಳು

..2..

ಮುಂದುವರೆದು, ಸಿದ್ಧಪಡಿಸಿದ ಕ್ರಿಯಾಯೋಜನೆಯ ಮಾಹಿತಿಯನ್ನು E-MIS ನಲ್ಲಿ ಲಭ್ಯವಿರುವ Table ಗಳ ಎಲ್ಲಾ ಕಾಲಂಗಳಲ್ಲಿ ಭರ್ತಿ ಮಾಡಿ, Submit ಮಾಡುವುದು. ನಂತರ, Submit ಮಾಡಿರುವ ಮಾಹಿತಿಯನ್ನು, Download ಮಾಡಿಕೊಂಡು ಸದರಿ ಪ್ರತಿಯನ್ನು ಪ್ರಾಂಶುಪಾಲರ ಸಹಿಯೊಂದಿಗೆ Covering letter ನೊಂದಿಗೆ ಅಡಕಗೊಳಿಸಿ ಕಡ್ಡಾಯವಾಗಿ ದಿನಾಂಕ : 12.09.2022 ರ ಒಳಗೆ ಈ ಕಛೇರಿಗೆ ತಲುಪಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಸೂಚನೆ :

1. ಕಾಲೇಜಿನ ವಿವಿಧ ಬ್ಯಾಂಕ್ ಖಾತೆಗಳಲ್ಲಿ ಹಿಂದಿನ ವರ್ಷಗಳಲ್ಲಿ ಜಮಾ ಆಗಿ ಉಳಿಕೆ ಆಗಿರುವ ಮೊತ್ತ (ಸರ್ಕಾರಕ್ಕೆ ಸಲ್ಲಬೇಕಾದ ಬಡ್ಡಿ ಮೊತ್ತವನ್ನು ಹೊರತುಪಡಿಸಿ)
2. 2022-23ನೇ ಸಾಲಿನಲ್ಲಿ ಇಲ್ಲಿಯವರೆಗೂ ಸಂಗ್ರಹವಾಗಿರುವ ಮೊತ್ತ ಹಾಗೂ
3. 2022-23ನೇ ಸಾಲಿನ ದ್ವಿತೀಯ ಹಾಗೂ ತೃತೀಯ ಪದವಿ ವಿದ್ಯಾರ್ಥಿಗಳಿಂದ ಸಂಗ್ರಹಿಸಬಹುದಾಗಿರುವ ಎಲ್ಲಾ ಶುಲ್ಕಗಳ ಅಂದಾಜು ಮೊತ್ತವನ್ನೊಳಗೊಂಡಂತೆ ಕ್ರ.ಸಂ 1 ರಿಂದ 3 ರ ವರೆಗಿನ ಮೊತ್ತಕ್ಕೆ ಐ.ಡಿ.ಪಿ ಸಿದ್ಧಪಡಿಸುವುದು.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು :

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ –ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
3. ಕಛೇರಿ ಪ್ರತಿ.